# ನವಿಲುಗನ್ನಡಿ

ಡಿಸೆಂಬರ್ ಸಂಚಿಕೆಯ ಮುಖಪುಟ ಆಕರ್ಷಕ. 'ಚೂರು ಭೂಮಿ ತುಣುಕು ಆಕಾಶ' (ಶುಭಾ ಎ.ಆರ್.), 'ತಳಿಯ ನೆರಳು' (ರಾಜು ಹೆಗಡೆ) ಕತೆಗಳು ಚೆನ್ನಾಗಿವೆ.

**ಶ್ರುತಿ ಭಟ್, ಮುಂಬೈ**

ವಸ್ತು ವೈವಿಧ್ಯದಿಂದ ಕೂಡಿದ ಡಿಸೆಂಬರ್ ಸಂಚಿಕೆ ಅರ್ಥಪೂರ್ಣ. 'ಪಾಪಪ್ರಜ್ಞೆ' (ಕೆ.ವಿ. ರಾಜಲಕ್ಷ್ಮಿ), 'ಸಂಗಾತಿ' (ರವಿರಾಜ ಬೈಕಂಪಾಡಿ), 'ಕೋತಿಯ ಪಂಜ' (ಮೂಲ: ಡಬ್ಲ್ಯು.ಡಬ್ಲ್ಯು. ಜೇಕಬ್ಸ್, ಕನ್ನಡಕ್ಕೆ: ಜೆ.ವಿ. ಕಾರ್ಲೊ) ಗಮನ ಸೆಳೆದವು. 'ನೆನಪಿನ ಕಥನಕ್ಕೆ ನೊಬೆಲ್' (ಕನಕರಾಜ್ ಆರನಕಟ್ಟೆ) ಲೇಖನ ವಿಶೇಷವಾಗಿತ್ತು.

**ಎನ್. ಮಹದೇವ, ಚೆನ್ನೈ**

'ಸ್ಟಾಫ್ ರೂಮಿನ ಸೌಗಂಧಿಕಾ ಪುಷ್ಪಗಳು' (ಜಾಹ್ನವಿ ಹಳ್ಳೂರ) ಲಲಿತ ಪ್ರಬಂಧ ಇಷ್ಟವಾಯಿತು. ಪ್ರಬಂಧದಲ್ಲಿ ಪ್ರತಿಯೊಬ್ಬ ಶಿಕ್ಷಕಿಗೆ ಒಂದೊಂದು ಹೂವಿನ ಹೆಸರು ಕೊಟ್ಟಿದ್ದನ್ನು ಓದಿ ನಗು ಬಂತು.

**ಕೆ. ಬಾಲಚಂದ್ರ, ಕಲಬುರ್ಗಿ**

'ಮಯೂರ'ದಲ್ಲಿ ಪತ್ತೇದಾರಿ ಕತೆಗಳು ಪ್ರಕಟವಾಗುತ್ತಿರುವುದು ಸ್ವಾಗತಾರ್ಹ. ಈ ಬಾರಿ 'ಸಂಗಾತಿ' (ರವಿರಾಜ ಬೈಕಂಪಾಡಿ) ಕತೆ ಓದಿಸಿಕೊಂಡು ಹೋಯಿತು.

**ಶ್ರೀನಾಥ್ ಕೊನೇಟಿ, ಬೆಂಗಳೂರು**

'ಅತಿಯಾಸೆ ಗತಿಗೇಡು' ಎನ್ನುವ ಸಂದೇಶ ನೀಡುವ 'ಕೋತಿಯ ಪಂಜ' (ಡಬ್ಲ್ಯು.ಡಬ್ಲ್ಯು. ಜೇಕಬ್ಸ್) ಉತ್ತಮ ಕತೆ. ಇಂತಹ ಕತೆಗಳೂ ಕೂಡ ನಮ್ಮ ಜೀವನವನ್ನು ರೂಪಿಸಬಲ್ಲವು.

**ಬಿ.ಆರ್. ಭಾರತಿ, ತೀರ್ಥಹಳ್ಳಿ**




'ಚೂರು ಭೂಮಿ ತುಣುಕು ಆಕಾಶ' (ಶುಭಾ ಎ.ಆರ್.) ಕತೆ ಬೆಂಗಳೂರು ವಾಸಿಗಳ ಸದ್ಯದ ಬದುಕಿನ ಚಿತ್ರಣವಾಗಿದೆ. 'ಮಲೆನಾಡ ಹುಡುಗಿ ಬಯಲು ಸೀಮೆಯ ಹುಡುಗ' (ನಾಗತಿಹಳ್ಳಿ ಚಂದ್ರಶೇಖರ) ಕತೆ ಸೊಗಸಾಗಿದೆ.

**ದೇವಿಂದ್ರಪ್ಪ ಬಿ.ಕೆ., ಹಂಪಿ**

'ಚೂರು ಭೂಮಿ ತುಣುಕು ಆಕಾಶ' ಮಾನವೀಯ ಸಂಬಂಧಗಳ ತಂತುಗಳನ್ನು ಮೀಟುವ ಕತೆ. ಆಕರ್ಷಕ ನಿರೂಪಣೆಯಿಂದ ಈ ಕತೆ ಗಮನ ಸೆಳೆಯಿತು.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

'ನನ್ನ ಕಥಾಪ್ರಸಂಗ' ಮಾಲಿಕೆಯಲ್ಲಿ ಕೇಶವ ಮಳಗಿ ಅವರ ಅನುಭವ ಕಥನ ಓದಿ ಖುಷಿಯಾಯಿತು. ಪ್ರತಿತಿಂಗಳೂ ಕತೆಗಾರರ ಕತೆ ಕಟ್ಟುವ ಅನುಭವವನ್ನು ಓದುಗರ ಮುಂದಿಡುವ ಈ ಮಾಲಿಕೆ ಚೆನ್ನಾಗಿ ಮೂಡಿಬರುತ್ತಿದೆ.

**ಇಂದುಮತಿ ಎಸ್.ಕೆ., ಬೆಂಗಳೂರು**

'ಸರ್ಪಸುತ್ತು' (ವಸುಮತಿ ಉಡುಪ) ಕತೆ ಹೆಣ್ಣೊಬ್ಬಳ ಅಸಹಾಯಕತೆ, ಪ್ರೀತಿ, ಅಂತಃಕರಣವನ್ನು ನವಿರಾಗಿ ಚಿತ್ರಿಸಿದೆ. ಈ ಬಾರಿಯ ಕವಿತೆಗಳು ಮನಮೋಹಕವಾಗಿವೆ.

**ಆರ್.ಕೆ. ಮಂಗಳಾ, ಬಳ್ಳಾರಿ**